(SRI T. SUBRAMANYA)

functions of the taluk board. Therefore, if he approves, it is as good as the taluk board approving.

PAPERS LAID ON THE TABLE.

Sri KADIDAL MANJAPPA (Minister for Revenue).—Sir, I lay on the Table Order No. RD 6 GST 60, dated 21st March 1960 issued under sub-section (1) of Section 9 of the Mysore Stamp Act, 1957.

NON-OFFICIAL RESOLUTIONS.

Laying of New Railway lines in the State.

ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಅಧ್ಯಕ್ಷರೆ, ಮೊನ್ನೆಯ ದಿವಸ ಸರ್ಕಾರದವರು ಒಂದು ನಿರ್ಣಯವನ್ನು ತಂದು ತಮ್ಮೂಲಕ ಖಾನಗೀ ನಿರ್ಣಯಗಳ ಬಗ್ಗೆ ವಿರೋಧಪಕ್ಷದವರಿಗಿದ್ದ ಮೂಲಭೂತ ಹಕ್ಕುಗಳನ್ನೆಲ್ಲ ಕಸಿದುಕೊಂಡು, ಸಭೆಯ ಕಾರ್ಯಕಲಾಪಗಳ ನೀತಿ-ನೇಮಗಳಿಗೆಲ್ಲ ತಿಲಾಂಜಲಿಯನ್ನಿತ್ತಿದ್ದಾರೆ. ಇಂಥ ಕರಾಳ ಶಾಸನವನ್ನು ಜಾರಿ ಮಾಡತಕ್ಕ ಯಾವ ಶಾಸನ ಸಭೆಯಲ್ಲೇ ಆಗಲೀ ನಾವು ಸಾರ್ವಜನಿಕರ ಹಿತದ ಸಲುವಾಗಿ ಏನು ಸಾಧಿಸಲಿಕ್ಕೂ ಸಾಧ್ಯವಿಲ್ಲ, ಆದಕಾರಣ "ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ದೇವಾ?" ಎಂದ ಹಾಗೆ "ಕಾಂಗ್ರೆಸ್ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನು ಭುವನೇಶ್ವರಿ?" ಎಂದು ಹೇಳಿಕೊಂಡು ಸರ್ಕಾರದವರ ನೀತಿಯ ಬಗ್ಗೆ ವಿರೋಧ ಪಕ್ಷದ ಸದಸ್ಯರಾದ ನಾವು ನಮ್ಮ ತೀವ್ರ ಪ್ರತಿಭಟನೆಯನ್ನು ಸೂಚಿಸುವ ಸಲುವಾಗಿ ನಾವೀಗ ಸಭೆಯಿಂದೆದ್ದು ಹೊರಗಡೆಗೆ ಹೋಗುತ್ತೇವೆ.

(Sri B. K. Nagoor and some other Members withdrew from the House).

Mr. SPEAKER.—I have received a number of amendments. But most of them are out of order. Sri K. P. Gadag's amendment is in order.

Regarding Dr. Nagan Gowda's amendment, it may be worded as: 'after the words "the following railway lines", add "especially 1 and 2 as mentioned below, in view of the fact that the port of Mangalore is going to be developed as all weather port and Karwar as an intermediary port."

Sri A. S. PATIL.—What about my amendment?

Mr. SPEAKER.—Your amendment has been disallowed, because it goes far beyond the scope of the resolution.

Mr. SPEAKER.—Sri Gadag may move his amendment.

Sri K. P. GADAG (Gadag).—Sir, I beg to move the following amendment to the resolution moved by Sri A. J. Doddameti:

> (*a*) 'Add after "action for constructing the following Railway lines" the words "that are quite essential for the development of ports, trade and industry in the State."'
>
> (*b*) "Delete Nos. 3, 4, 5 and 6-Railway lines from the Resolution."

Mr. SPEAKER.—Amendment moved:

> (*a*) 'Add after "action for constructing the following Railway lines" the words "that are quite essential for the development of ports, trade and industry in the State."'
>
> (*b*) 'Delete Nos. 3, 4, 5 and 6-Railway lines from the Resolution.'

Dr. R. NAGAN GOWDA.—I move the following amendment:

> 'After the words "the following Railway lines", add "especially Nos. 1 and 2 as mentioned below in view of the fact that the Port of Mangalore is going to be developed as an all weather Port and Karwar as an intermediate Port."'

Mr. SPEAKER.—Amendment moved:

> 'After the words "the following Railway lines", add "especially Nos. 1 and 2 as mentioned below in view of the fact that the Port of Mangalore is going to be developed as an all weather Port and Karwar as an intermediate Port."'

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಸ್ವಾಮಿ, ನಿನ್ನೆ ನಾನು ನೂಚಿಸಿದ ರೈಲ್ವೇ ಬೇಡಿಕೆಗಳ ಬಗ್ಗೆ ಸರ್ಕಾರದವರು ಶಿಫಾರಸು ಮಾಡಬೇಕೆನ್ನುವುದರ ಸಲುವಾಗಿ ನಾನು ನನ್ನ ಈ ಮನವಿಯನ್ನು ಈ ಸಭೆಯಲ್ಲಿ ಮಂಡಿಸುತ್ತೇನೆ. ನಾವು ಹೊಸ ಹೊದಲು ರೈಲ್ವೆಗಳ ಮಾರ್ಗ ರಚನೆಯನ್ನೂ, ಯಾವ ಒಂದು ತಳಹದಿಯ ಮೇಲೆ ರಚನೆ ಮಾಡ ಬೇಕೆನ್ನುವುದನ್ನೂ ಪರಿಶೀಲನೆ ಮಾಡಿದಲ್ಲಿ ಸಾಮಾನ್ಯ ವಾಗಿ ಯಾವ ಯಾವ ಭಾಗದಲ್ಲಿ ರೈಲ್ವೆಗಳ ಪ್ರಸಾರ ಕಡಿಮೆ ಇದೆ, ರೈಲ್ವೆ ಲೈನುಗಳು ಕಡಿಮೆ ಇವೆ ಎನ್ನುವುದು ಒಂದು. ಹಿಂದುಳಿದ ಮಾರ್ಗಗಳು ಎನ್ನುವುದು ಎರಡನೆಯದು. ಮತ್ತು ಯಾವ ಮಾರ್ಗದಲ್ಲಿ ರೈಲ್ವೇ ಹಾಯ್ದರೆ ಉತ್ಪನ್ನಕ್ಕೆ ಮತ್ತು ಉದ್ಯೋಗಕ್ಕೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕುತ್ತದೆ ಎನ್ನುವುದು ಮೂರನೆಯದು. ಈ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಇದುವರೆಗೂ ರೈಲ್ವೇ ದೃಷ್ಟಿಯಿಂದ ಅತ್ಯಂತ ಹಿಂದುಳಿದಂತಹ ಪ್ರದೇಶ ದಕ್ಷಿಣ ದೇಶ. ಅದರಲ್ಲೂ ವಿಶೇಷತಃ ಕರ್ನಾಟಕ. ದಕ್ಷಿಣ ದೇಶದ ರೈಲ್ವೇನಲ್ಲಿ ಅದರಲ್ಲೂ ಮುಖ್ಯವಾಗಿ ಹಾಸನ-ಮಂಗಳೂರು, ಹುಬ್ಬಳ್ಳಿ-ಕಾರವಾರ ಲೈನನ್ನು ಬೇಗನೆ ಮಂಜೂರು ಮಾಡಬೇಕೆಂದು ಹಲವಾರು ವರ್ಷಗಳಿಂದಲೂ ನಾವು ಪ್ರಯತ್ನ ಮಾಡುತ್ತಾ ಇದ್ದೇವೆ. ಬೊಂಬಾಯಿ ಅಸೆಂಬ್ಲಿಯಲ್ಲಿದ್ದಾಗಲೂ ಈ ಪ್ರಶ್ನೆ ಹಲವಾರು ಸಲ ಎತ್ತಲ್ಪಟ್ಟಿದೆ ಹುಬ್ಬಳ್ಳಿ-ಮಂಗಳೂರು ರೈಲ್ವೆ. ಇದೇ ರೀತಿ ಹಳೇ ಮೈಸೂರಿನಲ್ಲಿ ಹಾಸನ ಮತ್ತು ಮದರಾಸು ರಾಜ್ಯದಲ್ಲಿದ್ದ ಮಂಗಳೂರಿಗೆ ರೈಲ್ವೆ ಲೈನ್ ಜೋಡಿಸ ಬೇಕೆಂದು ಹೇಳುತ್ತಿರುವುದು ಬಹಳ ಹಳೆಯ ಪ್ರಯತ್ನ. ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ನವರು ಮತ್ತು ಅಂದಿನ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅವರು—ಇಂದಿನ ಮೈಸೂರು ಕಾಂಗ್ರೆಸ್ ಕಮಿಟಿಯೇ ಅಂದಿನ ಕರ್ನಾಟಕ ಕಾಂಗ್ರೆಸ್ ಕಮಿಟಿ ಆಗಿತ್ತು,—ತಮ್ಮ ಅನೇಕ ಗೊತ್ತು ವಳಿಗಳ ಮೂಲಕ ಈ ರೈಲ್ವೇ ಬೇಡಿಕೆಗಳನ್ನು ಸರ್ಕಾರಕ್ಕೆ ಅನೇಕ ಸಲ ಒತ್ತಾಯ ಪಡಿಸಿದ್ದರು. ಆದರೆ ದುರ್ದೈವದಿಂದಲೋ ಏನೋ ಕೇಂದ್ರ ಸರ್ಕಾರದವರು ಈ ಭಾಗದ ಕಡೆ ವಿಶೇಷ ಲಕ್ಷ್ಯ ಕೊಟ್ಟಿಲ್ಲ ಎಂದು ಹೇಳಲಿಕ್ಕೆ ಬಹಳ ವಿಷಾದ ವೆನಿಸುತ್ತಿದೆ.

ಸ್ವಾಮಿ ಈ ರೈಲ್ವೇ ಲೈನಿನ ಭೂಪಟ ತಮ್ಮ ಎದುರಿಗೆ ಇರುವುದನ್ನು ನೋಡಿದರೆ ಗೊತ್ತಾಗುತ್ತದೆ ಉತ್ತರ ಪ್ರದೇಶ ಮತ್ತು ಬಿಹಾರ್, ಪಂಜಾಬ್‌ದಲ್ಲಿ ಎಲ್ಲಕ್ಕಿಂತ ಹೆಚ್ಚಿನ ರೈಲ್ವೆ ಲೈನುಗಳು ಉಂಟು. ಆಮೇಲೆ ಪೂರ್ವ ಭಾಗದಲ್ಲಿ ಬಂಗಾಳದಲ್ಲಿ ಮತ್ತು ದಕ್ಷಿಣದಲ್ಲಿ ಎಂದರೆ ನಮ್ಮ ಕರ್ನಾಟಕವೂ ಬಂತಲ್ಲಾ. ಈ ಭಾಗದಲ್ಲಿ ಕಡಿಮೆ ರೈಲ್ವೆ ಲೈನ್‌ಗಳು ಉಂಟು. ಹೀಗಾಗಲಿಕ್ಕೆ ಯಾರಾದರೂ ಒಬ್ಬರನ್ನು ಜವಾಬ್ದಾರಿ ಹಿಡಿಯಲಿಕ್ಕೆ ಆಗುವುದಿಲ್ಲ. ಏಕೆಂದರೆ ಈ ರೈಲ್ವೆ ಲೈನುಗಳ ಪ್ರಸಾರ 106 ವರ್ಷಗಳಿಂದ ಬಂದದ್ದು ಈ 106 ವರ್ಷಗಳಿಂದ ರೈಲ್ವೇ ಲೈನ್ ಹಾಕುತ್ತಾ ಬಂದದ್ದು ಕೇವಲ ಯಾವುದೋ ಒಂದು ಪಕ್ಷಪಾತ ದೃಷ್ಟಿಯಿಂದ ಮಾಡಿದ್ದಾರೆ ಎಂದು ಹೇಳಲಿಕ್ಕೆ ಆಗದಿದ್ದರೂ ಸ್ವರಾಜ್ಯ ಸಿಕ್ಕಿ 12 ವರ್ಷಗಳಾದರೂ ಸಹ ದಕ್ಷಿಣ ಭಾಗದಲ್ಲಿ ಸಾಕಾದಷ್ಟು ರೈಲ್ವೆ ಲೈನುಗಳನ್ನು ಹಾಕಲಿಕ್ಕೆ ಕೇಂದ್ರ ಸರ್ಕಾರ ಗಮನ ಕೊಟ್ಟಿಲ್ಲ ಎನ್ನುವುದನ್ನು ಹೇಳದೇ ಗತ್ಯಂತರವಿಲ್ಲ. ಉದಾಹರಣೆಗಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ 842 ಮೈಲು ಹೊಸ ರೈಲ್ವೇ ಲೈನುಗಳನ್ನು ಕೈಕೊಳ್ಳಲಾಯಿತು. ಆ 842 ರೈಲ್ವೆ ಲೈನುಗಳು ಯಾವ ಯಾವುದು ಎಂದರೆ :

ಪೂರ್ವ ರೈಲ್ವೇದಲ್ಲಿ :

Baraset–Basirhal	...	44 ಮೈಲ

Southern Railway :

Barkakana–Birmitrapur	...	124 ಮೈಲ್
Rour Kela–Taldih Dumaro		30 ,,
Noamundi–Bansapani	...	18 ,,
Bhilai–Dalli Rajhara	...	60 ,,
Gua–Manoharpur	...	30 ,,
Karnapura–Ramgarh	...	75 ,,
Central India coal fields	...	125 ,,
Kobra Extension	...	5 ,,
		467

Central Railway :

Guna–Ujjain	...	175 ಮೈಲ

Northern Railway :

Robert Sanj–Garhwa Road		100 ಮೈಲ

North Eastern Railway :

Mirzaffarpur–Darbhanga	...	35 ಮೈಲ
Ramshai–Binnaguri	...	21 ,,
Total	...	842 ಮೈಲ

ಹೀಗೆ ಸಾಮಾನ್ಯವಾಗಿ 842 ಮೈಲು ರೈಲ್ವೇ ಗಳನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಲಾಯಿತು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ರೈಲ್ವೆಗಳನ್ನು ನಮ್ಮ ಕೇಂದ್ರ ಸರ್ಕಾರದವರು ತೆಗೆದುಕೊಳ್ಳುತ್ತಾರೆಯೋ ನಿಶ್ಚಿತವಾಗಿ ಗೊತ್ತಿಲ್ಲ. ಆದರೆ ದಕ್ಷಿಣದಲ್ಲಿ ಮಾತ್ರ ತೆಗೆದುಕೊಳ್ಳುವುದು ಬಹಳ ಸಂಶಯಾಸ್ಪದ ಪರಿಸ್ಥಿತಿ ಇದೆ. ನಾವು ಈಗ ಸಕಾಲದಲ್ಲಿ ಒತ್ತಿ ಒತ್ತಿ ಒತ್ತಾಯ ಮಾಡದಿದ್ದರೆ ನಮಗೆ ಒಂದು, ಎರಡೂ ಸಹ ಸಿಕ್ಕೀತೇ ಎಂದು ಹೇಳಲಿಕ್ಕೆ ಆಗುವುದಿಲ್ಲ. ಈ ಕಾರಣಕ್ಕಾಗಿ ಇದು ಒಂದು ಒಳ್ಳೆಯ ಅತ್ಯುತ್ತಮ ವಾದ ಸಮಯ, ಈ ಸಮಯದಲ್ಲಿ ನಮ್ಮ ಸರ್ಕಾರ ಕೇಂದ್ರ ಸರ್ಕಾರದಮೇಲೆ ಒತ್ತಾಯ ತರಬೇಕು. ಇವತ್ತಾದರೂ ನಮ್ಮ ಸ್ನೇಹಿತರು ಇರಬೇಕಾಗಿತ್ತು. ಇದು ಬಹಳ ಮಹತ್ವದ ಪ್ರಶ್ನೆ ಇದೆ. ಕರ್ನಾಟಕದ ಬಗ್ಗೆ ಕದಾಚಿತ್ ಅವರಿಗಿಂತ ಕಮ್ಮಿ interest ನನಗೆ ಇಲ್ಲ. ಆದರೂ ಇವತ್ತು ಅವರು ಇದ್ದಿದ್ದರೆ ನೆಟ್ಟಗೆ ಇತ್ತು. ಈ ದೇಶದಲ್ಲಿ ರಾಜಕೀಯ ಇಲ್ಲಿ ಇದ್ದರೂ ಸಹ—ಪ್ರತಿಯೊಂದು ಪತಿಪತ್ನಿಯರಲ್ಲೂ ಕೂಡ ಖಾಸಗಿ ದೃಷ್ಟಿಯಿಂದ ನೋಡುವ ಕಾಲ ಬಂದಿದೆ. ಅದಕ್ಕೆ ಏನು ಮಾಡುವುದು ಅವರು ಇದ್ದಿದ್ದರೆ ಚೆನ್ನಾಗಿತ್ತು ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು ಈ ಬಗೆಯ ರೈಲ್ವೆ ಲೈನ್‌ಗಳನ್ನು ಹಾಕುವ ವಿಷಯದಲ್ಲಿ ನಮ್ಮ ಸರ್ಕಾರ ಕರ್ನಾಟಕ ಪ್ರಾಂತ ವಾದ ಮೇಲೆ ಕೆಲವು ಪ್ರಯತ್ನಗಳನ್ನು ಮಾಡಿದ್ದಾರೆ.

(ಶ್ರೀ ಎ. ಜೆ. ದೊಡ್ಡಮೇಟಿ)

ತತ್ಪೂರ್ವದಲ್ಲಿಯೂ ಕೂಡ ಹಳೆಯ ಅಸೆಂಬ್ಲಿಯಲ್ಲಿ ಕೆಲವು ರೈಲ್ವೆ ಲೈನುಗಳನ್ನು ಹಾಕಬೇಕೆಂದು ಅದಕ್ಕಾಗಿ ಪ್ರಯತ್ನ ಮಾಡಿದುದೂ ಗೊತ್ತಿದೆ. ಮಾರ್ಚ್ ಆರನೆಯ ತಾರೀಕು ನಮ್ಮ ಮುಖ್ಯ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ 17 ರೈಲ್ವೆ ಲೈನ್‌ಗಳನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿರುವುದಾಗಿಯೂ, ಅದರಲ್ಲಿ ಮುಖ್ಯವಾಗಿ ಆರು ಲೈನ್‌ಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದುದಾಗಿಯೂ ಹೇಳಿದ್ದಾರೆ. ಆ ಆರು ಲೈನ್‌ಗಳು ಯಾವುವೆಂದರೆ, ಹಾಸನ-ಮಂಗಳೂರು, ಹುಬ್ಬಳ್ಳಿ-ಕಾರವಾರ, ಕೊಟ್ಟೂರು-ಹರಿಹರ, ರಾಯಬಾಗ್ - ರಾಯಚೂರು, ಬೆಂಗಳೂರು-ಹೊಸೂರು– ಸೇಲಂ, ಮೈಸೂರು-ವೀರರಾಜಪೇಟೆ - ತಲಚೇರಿ. ಸಾಮಾನ್ಯವಾಗಿ ನೋಡಿದರೆ, ನನ್ನ ಸೂಚನೆಯಲ್ಲಿಯೂ ಇವುಗಳಿವೆ. ರಾಯಬಾಗ್ - ರಾಯಚೂರಿನ ಬದಲು ಗದಗ-ರಾಯಚೂರಿದೆ; ಬೆಂಗಳೂರು - ವೀರರಾಜಪೇಟೆ ಎಂದು ಹಾಕಿದ್ದೇನೆ....

ಅಧ್ಯಕ್ಷರು.—ಯಾವುದನ್ನು ನಿಮ್ಮ ನಿರ್ಣಯದಲ್ಲಿ ಹಾಕಿದ್ದೀರೋ ಅದರಂತೆ ಮಾತನಾಡಬೇಕು; ಬದರಾವಣೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಆಗಬಹುದು, ಈಗ ನಾನು ಮುಖ್ಯವಾಗಿ ಒಂದು ಮಾತನ್ನು ಹೇಳುವುದಕ್ಕೆ ಅಪೇಕ್ಷಿಸುತ್ತೇನೆ. ಡಾ॥ ನಾಗನಗೌಡರು ಒಂದು ತಿದ್ದುಪಡಿಯನ್ನು ಕಳುಹಿಸಿದ್ದಾರೆ. ಅದು ಈಗ ನನು ಮುಂದಿಲ್ಲ.

ಅಧ್ಯಕ್ಷರು.—ಅವರ ತಿದ್ದುಪಡಿಯಲ್ಲಿ ಹೀಗಿದೆ: ಹಾಸನ-ಮಂಗಳೂರು, ಹುಬ್ಬಳ್ಳಿ-ಕಾರವಾರ ರೇಲ್ವೆ ಗಳಿಗೆ ಮಂಗಳೂರು All weather ports, ಹಾಗೂ ಕಾರಾವಾರ intermediate ಆಗುವುದರಿಂದ top priority ಕೊಡಬೇಕೆಂದಿದೆ;

ಶ್ರೀ ಎ. ಜೆ. ದೊಡ್ಡಮೇಟಿ.—ಅದನ್ನು ಸ್ವೀಕಾರ ಮಾಡುವುದಕ್ಕೆ ನನ್ನ ಅಡ್ಡಿ ಇಲ್ಲ; ಆದರೆ ಗದಗದ ವಿಚಾರ ತಿದ್ದುಪಡಿಯಲ್ಲಿ ಪೂರ್ತಿ ವ್ಯತ್ಯಾಸವಿದೆ. ಹೀಗೆ ತಿದ್ದುಪಡಿ ಮಾಡುವುದು ಅನಾವಶ್ಯಕ. ಆದಕಾರಣ ಗದಗ್ ವಿಚಾರದಲ್ಲಿ ಅವರ ತಿದ್ದುಪಡಿಯನ್ನು ಒತ್ತಾಯ ಮಾಡಬಾರದೆಂದು ಶ್ರೀಮಾನ್ ನಾಗನಗೌಡರಿಗೆ ಹೇಳಿ ಅವರ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ.

ಸ್ಥಾಪಿಸಿ, ನಾನಾಗಲೇ ಹೇಳಿದಂತೆ, ರೆಕ್ಕ ಹಾಕಿದರೆ, ಭೂಪಟದ ಮೇಲೆ ನೋಡಿದರೆ, ಒಟ್ಟು ಇಂಡಿಯಾದೇಶದ ರೈಲ್ವೆ ಲೈನ್‌ಗಳಲ್ಲಿ ಸಾಮಾನ್ಯವಾಗಿ ಪಂಜಾಬು, ಉತ್ತರ ಪ್ರದೇಶ ಮತ್ತು ಬಿಹಾರ್‌ನಲ್ಲಿ ಅತ್ಯಂತ ಹೆಚ್ಚಾಗಿದೆ, ಬಂಗಾಳದಲ್ಲಿ ಸ್ವಲ್ಪ ಕಡಮೆ ಇದೆ. ಈ ದೃಷ್ಟಿಯಲ್ಲಿ ವಿಚಾರ ಮಾಡಿದರೆ ಇಡೀ ಹಿಂದೂಸ್ಥಾನದಲ್ಲಿ ಎಷ್ಟು ಮೈಲು ರೈಲ್ವೆ ಇದೆಯೋ ಅದರಲ್ಲಿ ಬಹುಭಾಗ ಉತ್ತರ ಹಿಂದೂಸ್ಥಾನದಲ್ಲುಂಟು. ಈ ದೃಷ್ಟಿಯಿಂದ ಸರ್ಕಾರದವರು ಯೋಚನೆ ಮಾಡಿ ಈ ಎಲ್ಲ ಲೈನ್‌ಗಳನ್ನು ದಕ್ಷಿಣ ಪ್ರದೇಶದಲ್ಲಿ ಹಾಕಬೇಕು. ಇಲ್ಲಿರತಕ್ಕ ಉತ್ಪನ್ನವನ್ನೂ potentiality ಯನ್ನೂ ಪೂರ್ಣವಾಗಿ ಉಪಯೋಗ ಮಾಡುವ ದೃಷ್ಟಿಯಿಂದ ಇಲ್ಲಗೆ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಆರು ರೈಲ್ವೆ ಲೈನ್‌ಗಳನ್ನು ಸರ್ಕಾರ ಶಿಫಾರಸು ಮಾಡುವುದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದೆ. ಎರಡು ಲೈನ್‌ಗಳಿಗೆ ಪ್ರಾಶಸ್ತ್ಯ ಕೊಡಬೇಕೆಂದು ಶ್ರೀಮಾನ್ ನಾಗನಗೌಡರು ತಿದ್ದುಪಡಿಯನ್ನು ತಂದಿದ್ದರೆ, ಅದನ್ನೂ ನಾನು ಒಪ್ಪುತ್ತೇನೆಂದ ಮೇಲೆ ಉಳಿದ ಮಾತಿನ ಮೇಲೆ ವಿವಾದ ಮಾಡುವುದು ಜರೂರಲ್ಲ. ನಮ್ಮ ಸರ್ಕಾರದವರು ಕರ್ಣಾಟಕ ಆದಮೇಲೆ ಕೆಲವು ಪ್ರಯತ್ನಗಳನ್ನು ಮಾಡಿದ್ದಾರೆ. ಕೇಂದ್ರದವರನ್ನು ಕಂಡಿದ್ದಾರೆ, ಅವರಲ್ಲಿ ಮಾತನಾಡಿದ್ದಾರೆ. ಇಷ್ಟಾದರೂ ನಮ್ಮ ಕಾರ್ಯ ಆಗಿಲ್ಲ ವೆಂಬುದು ಸ್ವಯಂ ಸ್ಪಷ್ಟವಾಗಿದೆ. ಇದಕ್ಕೆ ಕಾರಣವೇನೆಂದು ಹುಡುಕುವುದಕ್ಕಿಂತ, ಇದನ್ನು ತೆಗೆದುಕೊಳ್ಳುವಂತೆ ಮಾಡುವ ಪ್ರಯತ್ನವನ್ನು ಸಾಮರ್ಥ್ಯದಿಂದ ಮಾಡಿಲ್ಲವೆನ್ನುವುದನ್ನು ಒಪ್ಪಿಕೊಳ್ಳಬೇಕು, ಶರಾವತಿ ಯೋಜನೆಯ ಬಗ್ಗೆ, ಗಡಿ ತೀರ್ಮಾನದ ಬಗ್ಗೆ initiative ತೆಗೆದುಕೊಂಡು ಒಂದು ವಿಶೇಷ ಸೂಚನೆಯನ್ನು ತಂದು, ಈ ಸಭೆಯ ಆಶೀರ್ವಾದವನ್ನು ತೆಗೆದುಕೊಂಡರೆ ಉತ್ತಮವೆಂದು, ಆ ನಿರ್ಣಯಕ್ಕೆ ಈ ಸಭೆಯ ಸ್ವೀಕಾರ ತೆಗೆದುಕೊಂಡರು. ಹಾಗೆಯೇ ಈಗ ಮಾಡಬೇಕು ಈ ವಿಷಯದ ಬಗ್ಗೆ. ಈ ದೃಷ್ಟಿಯಿಂದ ಈಗ ಈ ಶಾಸನ ಸಭೆಯ ಬೆಂಬಲವನ್ನು ನಮ್ಮ ಸರ್ಕಾರಕ್ಕೆ ಕೊಡುವ ಉದ್ದೇಶದಿಂದ ಈ ನಿರ್ಣಯವನ್ನು ಮಂಡಿಸಲು ನಿಂತಿದ್ದೇನೆ. ನಿಜವಾಗಿ ಸರ್ಕಾರದವರು ಈ ವಿಷಯದಲ್ಲಿ ಕೆಲವು ಪ್ರಯತ್ನ ಮಾಡಿದ್ದಾರೆ, ಈಗ ವಿರೋಧಪಕ್ಷದವರೂ ಈ ಸಭೆಯಲ್ಲಿದ್ದಿದ್ದರೆ ಅವರ ಬೆಂಬಲವೂ ಈ ನಿರ್ಣಯಕ್ಕೆ ಸಿಕ್ಕುತ್ತಿತ್ತು ಎನ್ನುವುದರಲ್ಲಿ ಅನುಮಾನವೇ ಇಲ್ಲ. ನಾವು ಬೇಡಿದ ರೈಲ್ವೆಗಳ ಬಗ್ಗೆ ಮೊನ್ನೆ ಲೋಕ ಸಭೆಯಲ್ಲಿ ಬಹಳ ಗಂಭೀರವಾಗಿ ಚರ್ಚೆ ನಡೆದುದರ ಪರಿಣಾಮವಾಗಿ ಕರ್ಣಾಟಕದ ಎಂ. ಪಿ. ಗಳಿಗೂ ಸರ್ಕಾರಕ್ಕೂ ತೀವ್ರ ಚರ್ಚೆ ನಡೆಯಿತು. ಈ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ, ಈಗ ಈ ಸಭೆಯ ಬೆಂಬಲ ಬರಬೇಕೆಂಬ ಸಲುವಾಗಿ, ಸರ್ಕಾರದ ಕೈ ಬಲಗೊಳ್ಳಬೇಕೆಂಬ ಉದ್ದೇಶದಿಂದ ಈ ನಿರ್ಣಯವನ್ನು ಸರ್ಕಾರ ಅಂಗೀಕಾರ ಮಾಡುವುದು ಅವಶ್ಯಕ. ದ್ವಿತೀಯ ಯೋಜನೆಯಲ್ಲಿ ತೆಗೆದುಕೊಳ್ಳಬೇಕೆಂದೂ ತೃತೀಯ ಯೋಜನೆಯಲ್ಲಿ ತೆಗೆದುಕೊಳ್ಳಬೇಕೆಂದೂ ಲೋಕ ಸಭೆಯಲ್ಲಿ ಚರ್ಚೆಯಾಯಿತು. ಅಲ್ಲಿ ಈ ಪ್ರಶ್ನೆಯ ಮೇಲೆ ರೈಲ್ವೆ ಮಂತ್ರಿಗಳು ಕೊಟ್ಟ ಉತ್ತರ ವೃತ್ತ ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ನೋಡಿದರೆ ನಾವು ಬಹಳ ಬಲವಂತ ಮಾಡಿದರೆ ಇದು ನಮಗೆ ಸಿಕ್ಕುತ್ತದೆಂದೆನಿಸುತ್ತದೆ. ಸರ್ಕಾರ ಬಹಳ ಬಲವಂತ ಮಾಡಿ ಪ್ರಯತ್ನ ಮಾಡಬೇಕು. ಅಲ್ಲರುವ ನಮ್ಮ ಮೈಸೂರಿನ ಎಂ. ಪಿ. ಗಳೂ ಪ್ರಯತ್ನ ಮಾಡಬೇಕು. ಕರ್ಣಾಟಕ ಎನ್ನುವುದರಲ್ಲಿ ಮೈಸೂರು ಸೇರುತ್ತದೆಂದು ಹೇಳುತ್ತಾರೆ, ಸಂತೋಷ. ನಾನು ಹೇಳಿರುವ ರೈಲ್ವೆಗಳ ಗುಣಾವಗುಣಗಳನ್ನು ವಿವರಿಸಿ ಹೇಳುತ್ತೇನೆ.

ಅಧ್ಯಕ್ಷರು.—ನೀವು ಇನ್ನೂ ಮಾತಾಡುವುದಿದ್ದರೆ ಆಮೇಲೆ ಮುಂದುವರಿಸಬಹುದು. The House will now rise for recess and meet after half an hour.

The House adjourned for recess at Three of the Clock and reassembled at Thirty Minutes past Three of the Clock.

[MR. SPEAKER in the Chair.]

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ನಾನು ಈಗಾಗಲೇ.....

ಶ್ರೀ ಟಿ. ಎನ್. ಮೂಡಲಗಿರಿಗೌಡ(ಕುಣಿಗಲು).—ಒಂದು ವಿಷಯ. ಇಂಡಿಯಾ ಸರಕಾರದವರು ಅನ್ಯಾಯ ಮಾಡಿದ್ದಾರೆ ಎಂದು ಹೇಳಿದಿರಿ. ಅದೇನೇ ಇರಲಿ ಉತ್ತರ ಇಂಡಿಯಾದಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ರೈಲು ಹಾಕಿದ್ದಾರೆ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ರೈಲು ಹಾಕಿದ್ದಾರೆ ಎಂಬುದನ್ನು ವಿಶದವಾಗಿ ತಿಳಿಸಬಲ್ಲಿರಾ?

ಶ್ರೀ ಎ. ಜೆ. ದೊಡ್ಡಮೇಟಿ.—ದ್ವಿತೀಯ ಯೋಜನೆಯಲ್ಲಿ 842 ಮೈಲು ರಸ್ತೆ ಕೈಗೆಕೊಂಡಿದ್ದಾರೆ. ಇದರ ಹೊಕೆ ಒಂದು ಮೈಲು ಕೂಡ ಕೊಟ್ಟಿಲ್ಲ. ದಕ್ಷಿಣ ಇಂಡಿಯಾಕ್ಕೆ ಮೂರನೆಯ ಯೋಜನೆಯಲ್ಲಿಯೂ ಇಂತಿಷ್ಟೆ ತೆಗೆದುಕೊಳ್ಳುತ್ತಾರೆಂದು ನನಗೆ ಗೊತ್ತಿಲ್ಲದೆ ಇದ್ದರೂ ಸುಮಾರು 1,500 ಮೈಲು ವಿಸ್ತಾರವಾಗುತ್ತದೆಂದು ಕೇಳಿಬಂದಿರುವುದರಲ್ಲಿಯೂ ದಕ್ಷಿಣ ಇಂಡಿಯಾಕ್ಕೆ ಏನೂ ಕೊಟ್ಟಿಲ್ಲ.

ಒಬ್ಬ ಸದಸ್ಯರು.—ಎರಡನೆಯ ಯೋಜನೆಯಲ್ಲಿ 842 ಮೈಲು ಎಂದು ಹೇಳಿದಿರಿ. ಇಷ್ಟೂ ಪೂರ್ತಿ ಆಗಿದೆಯೇ?

ಏಕೆಂದರೆ ಮೂರನೆಯ ಪ್ಲಾನ್ ವಿಚಾರ ಹೇಳುತ್ತಾ ತಾವು ಹೊಸದಾಗಿ ಯಾವುದನ್ನೂ ತೆಗೆದುಕೊಳ್ಳುವುದಿಲ್ಲವೆಂದು ಒಂದು ಹೇಳಿಕೆ ಕೂಡ ಕೊಟ್ಟಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ತೃತೀಯ ಯೋಜನೆಯಲ್ಲಿ ಹಿಂದೆ ಏನು ತೆಗೆದುಕೊಂಡಿದ್ದಾರೆ, ಅದನ್ನು ಮುಗಿಸದೆ ಬೇರೆ ತೆಗೆದುಕೊಳ್ಳುವುದಿಲ್ಲವೆಂಬುದು ನಿಜ. ಆದರೂ, ತೃತೀಯ ಯೋಜನೆಯ ಬೆಳವಣಿಗೆಯನ್ನು ನೋಡಿದರೆ ಮತ್ತು ಶಿಫಾರಸುಗಳನ್ನು ನೋಡಿದರೆ, ತೃತೀಯ ಯೋಜನೆಯಲ್ಲಿ 1,500 ಮೈಲು ರೈಲ್ವೆ ಮಾಡುತ್ತಾರೆಂದು ಹೇಳಬಲ್ಲೆ.

I am not definite about it. ಅದು ಏನೇ ಇರಲಿ. ಈಗ ನಾವು ಯಾವ ರೈಲ್ವೆ ಸಿಫಾರಸು ಮಾಡಬೇಕೆಂದು ಕೇಳುತ್ತೀರೋ ಆ ರೈಲ್ವೆಗಳ ಮಹತ್ವದ ಬಗ್ಗೆ ನಾಲ್ಕು ಮಾತುಗಳನ್ನು ಈಗ ಹೇಳುತ್ತಾ ಇದ್ದೇನೆ. ಮೊದಲನೆಯದಾಗಿ ಹಾಸನ-ಮಂಗಳೂರು ರೈಲ್ವೆ. ಇದು 106 ಮೈಲು ಇದೆ. 8 ಕೋಟಿ ರೂಪಾಯಿ ವೆಚ್ಚ ಆಗಬಹುದು ಎಂದು ತಿಳಿದುಬರುತ್ತದೆ. ಇದರ ಹೊರತಾಗಿ ಹುಬ್ಬಳ್ಳಿ-ಕಾರವಾರ ರೈಲ್ವೆ. ಇದು 85 ಮೈಲು ಇದೆ. ಆರು ಕೋಟಿ ರೂಪಾಯಿ ಆಗಬಹುದು. ಇವು ಎರಡಕ್ಕೂ ಸರ್ವೇ ಆಗಿದೆ. ಹಾಸನ-ಮಂಗಳೂರು ರೈಲ್ವೆ ಬಗ್ಗೆ ಬಹಳ ದಿವಸದಿಂದ ಒತ್ತಾಯ ಮಾಡಿದುದಕ್ಕೆ ಒಂದು ಉತ್ತರ ಏನು ಹೇಳಿದ್ದಾರೆ ಎಂದರೆ ಈಗ ನಮ್ಮಲ್ಲಿ ಮೆಟೀರಿಯಲ್ ಇಲ್ಲ, ನಾಳೆ, ನಾಡಿದ್ದು ಆಗುತ್ತದೆ ಎಂಬ ಸ್ಥಿತಿಗೆ ಬಂದು, ಮೆಟೀರಿಯಲ್ ಲಭ್ಯ ಇಲ್ಲ ಆ ಕಾರಣದಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಸರ್ಕಾರ ಹೇಳಿದ್ದು ಕೇಳುತ್ತಾ ಇದ್ದೇವೆ. ಇದು ಏನೇ ಇರಲಿ. ಈಗ ಅನೇಕ ರೈಲ್ವೇ ಲೈನುಗಳನ್ನು ತೆಗೆದುಕೊಂಡಿದ್ದೇವೆ. ಯಾವುದಾದರೂ ಇಷ್ಟೇ ಮಹತ್ವದ್ದು ಅಥವಾ ಇದಕ್ಕಿಂತ ಕಡಿಮೆ ಮಹತ್ವದ್ದು, ಬೇರೆ ರೈಲ್ವೇ ಲೈನು ತೆಗೆದುಕೊಳ್ಳುವುದನ್ನು ಬದಲಾಯಿಸಿ, ಮೆಟೀರಿಯಲ್ ಇಲ್ಲ ಎಂಬ ಕಾರಣವನ್ನು ಎತ್ತಬಹುದಲ್ಲಾ, ಏಕೆ ಎತ್ತಬಾರದು? ಕೇಂದ್ರದೊಡನೆಯೂ ಪ್ರಯತ್ನಮಾಡಬೇಕು ಮತ್ತು ಕಾಲಬಂದರೆ ನಾವೂ ಮತ್ತು ಮೈಸೂರು ಸರ್ಕಾರದವರೂ ಹೆಚ್ಚು ಪ್ರಯತ್ನ ಮಾಡಿ ಹೆಚ್ಚಿನ ಕಬ್ಬಿಣವನ್ನು ದೊರಕಿಸಲಿಕ್ಕೆ, ಹೊಸ ಆಲೋಚನೆಯನ್ನು ಹೇಳಿಕೊಡಲಿಕ್ಕೆ, ಈಗಿನ ಸರ್ಕಾರ ಅಸಮರ್ಥವಿದೆ ಎಂದು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಪಾರ್ಲಿಮೆಂಟ್ ಮೆಂಬರುಗಳು ಎಷ್ಟು ಪ್ರಯತ್ನಮಾಡಿದ್ದಾರೆ, ಆದರಿಂದ ಎಷ್ಟು ಫಲತಾಂಶವಾಗಿದೆ ಎಂಬುದು ತಮಗೆ ಗೊತ್ತೇ?

ಶ್ರೀ ಎ. ಜೆ. ದೊಡ್ಡಮೇಟಿ.—ಇಲ್ಲಿ ಇಲ್ಲದವರ ವಿಷಯ ಹೇಳುವುದು ಬಹಳ ಕಷ್ಟ. ಆದರೆ ಬಹಳ ಜೀದದ ಮಾತು ಎಂದರೆ ಸರಿಯಾದ ರೀತಿಯಲ್ಲಿ, ಇಲ್ಲಿಂದ ಹೋದ ಪಾರ್ಲಿಮೆಂಟ್ ಸದಸ್ಯರು ಮತ್ತು ಮೂರು ಮಂದಿ ಮಂತ್ರಿಗಳು, ಒಬ್ಬರು ಪಾರ್ಲಿಮೆಂಟ್ ಸೆಕ್ರೆಟರಿಗಳು ಏನು ಪ್ರಯತ್ನಮಾಡಿದ್ದಾರೆ ಎಂದು ಅವರೇ ಹೇಳಬೇಕೇ ಹೊರತು ನಾನು ಹೇಳುವುದಕ್ಕಾಗುವುದಿಲ್ಲ. ಫಲಶಾಂಶ ನೋಡಿದರೆ ಅವರು ಪ್ರಯತ್ನ ಮಾಡಿದ್ದಾರೆಯೋ ಮಾಡಲಿಲ್ಲವೋ ಅದರ ಬಗ್ಗೆ ನಮಗೆ ಸಂದೇಹ ಬರುತ್ತದೆ. ಆ ದೃಷ್ಟಿಯಿಂದ ಈ ಕಡೆಗೆ ಹೆಚ್ಚು ನಾವೆಲ್ಲರೂ ಪ್ರಯತ್ನ ಮಾಡೋಣ. ಒಂದು ಬಲವಾದ ಪ್ರಯತ್ನ ಮಾಡಿದರೆ ಕೇಂದ್ರವನ್ನು ಅಲ್ಲಾಡಿಸಬಹುದು. ಆ ಸಾಮರ್ಥ್ಯ ನಮ್ಮಲ್ಲಿ ನಿಜವಾಗಿಯೂ ಇದೆ. ಅದಕ್ಕೆ ಅನುಮಾನಪಡಬೇಕಾಗಿಲ್ಲ. ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್‌ಗೆ ಗುರಿಯಾಗುವುದು ಬೇಡ. ಸುಪೀರಿಯಾರಿಟಿ ಕಾಂಪ್ಲೆಕ್ಸ್‌ನಿಂದ ಮೈಮರೆಯುವುದು ಬೇಡ. ನಿಜವಾದ ಅಳತೆ ಮಾಡಿಕೊಂಡು ನಿಜವಾದ ಸಾಮರ್ಥ್ಯ ತಿಳಿದುಕೊಂಡು ಅದಕ್ಕಿಂತ ಮೇಲೂ ಹೋಗುವುದೂ ಬೇಡ. ಅದಕ್ಕಿಂತ ಕಡಿಮೆ ಇಳಿಯುವುದೂ ಬೇಡ. ಇದ್ದ ಸಾಮರ್ಥ್ಯವನ್ನು ಸರಿಯಾಗಿ ಪರಿಣಾಮಕಾರಿಯಾಗಿ ಉಪಯೋಗ ಮಾಡಿದರೆ, ನನಗೆ ಅನಿಸುತ್ತದೆ. ಯಾವುದೋ ರೈಲ್ವೆಲೈನ್ ಆದರೂ ಒಮ್ಮೆಲೇ ತೆಗೆದುಕೊಳ್ಳಲಿಕ್ಕೆ ಅಡಚಣೆ ಆಗಬಹುದು. ಕನಿಷ್ಟ ಹಾಸನ-ಮಂಗಳೂರು, ಹುಬ್ಬಳ್ಳಿ-ಕಾರವಾರ ಈ ಎರಡಕ್ಕೆ ದರೂ ಪ್ರಯಾರಿಟಿ ಕೊಟ್ಟು ತೆಗೆದುಕೊಳ್ಳುವುದಕ್ಕೆ ಸಾಧ್ಯವಾದೀತು.

ಶ್ರೀ ಟಿ. ಮರಿಯಪ್ಪ.—ಹಾಸನ-ಮಂಗಳೂರು ರೈಲ್ವೇ, ಮಂಗಳೂರಿನಲ್ಲಿ ಫೋರ್ಮ್‌ವರ್ಕ್ ಪ್ರಾರಂಭವಾದ ನಂತರ earth work ತೆಗೆದುಕೊಳ್ಳುತ್ತೇವೆ ಎನ್ನುವ ಮಟ್ಟಕ್ಕೆ ಬಂದಿದೆ. The Railway Minister has definitely told us. They are waiting for clearance to begin earthwork. The Planning Commission has positively given clearance for the earth-work to be taken up.

ಶ್ರೀ ಎ. ಜೆ. ದೊಡ್ಡಮೇಟಿ.—ತಮ್ಮ ಅಭಿಪ್ರಾಯದಲ್ಲಿ ಹಾಸನ-ಮಂಗಳೂರು ರೈಲ್ವೇ ನಮ್ಮ ಕೈಯಲ್ಲಿ ಬಿದ್ದಹಾಗೆ ಇದೆ. ಹೌದೇ?

ಶ್ರೀ ಟಿ. ಮರಿಯಪ್ಪ.—ಹೌದು.

ಶ್ರೀ ಎ. ಜೆ. ದೊಡ್ಡಮೇಟಿ.—ಬಹಳ ಸಂತೋಷ. ತಮಗೆ ಬಾಯಲ್ಲಿ ಸಕ್ಕರೆ ಬೀಳಲಿ. ಆಮೇಲೆ ಹುಬ್ಬಳ್ಳಿ-ಕಾರವಾರ. ಇದರ ಮಹತ್ವ ಎಂದರೆ ಮಂಗಳೂರಿನಂತೆಯೇ ಇದು ದೊಡ್ಡ ಬಂದರಾಗುತ್ತದೆ. ಈ ಬಂದರುಗಳ ಮೂಲಕ ಅಯಾಯ ಮಲೆನಾಡು ಪ್ರದೇಶದ

(ಶ್ರೀ ಎ. ಜೆ. ದೊಡ್ಡಮೇಟಿ)

ಬೆಳವಣಿಗೆಗೆ ಬಹಳ ಅನುಕೂಲವಾಗುತ್ತದೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಮಲೆನಾಡು ಪ್ರದೇಶದಲ್ಲಿ ಬೆಳೆಯುತಕ್ಕ ಏಲಕ್ಕಿ, ಕಾಫಿ, ಟೀ ಮತ್ತು ಮೆಣಸು ಮುಂತಾದ ಪದಾರ್ಥಗಳನ್ನು ನಾವು ಹೊರದೇಶಕ್ಕೆ ಕಳುಹಿಸಿ ವ್ಯಾಪಾರ ಮಾಡಲಕ್ಕೆ ಮತ್ತು ಹೊರದೇಶದಿಂದ ಡಾಲರ್ ಸಂಪಾದನೆ ಮಾಡಲಿಕ್ಕೂ ಉಪಯೋಗ ಬೀಳುವಂಥ ಸಂಭವ ಇದೆ. ಹಾಗೆಯೇ ಹೇಳುವುದಾದರೆ ಹಾಸನ-ಮಂಗಳೂರು ರೈಲ್ವೇಗಳ ಬೆಳವಣಿಗೆಯಿಂದ ಮೈಸೂರಿನ ಸುತ್ತಮುತ್ತ ಹೆಚ್ಚಿನ ಉದ್ಯೋಗಕ್ಕೂ ಬೆಳವಣಿಗೆಗೂ ಅನ್ಪದವಾಗುವ ಸಂಭವ ಇದೆ. ನೀರಿನ ಪುರವ ಮುಂತಾದ ಕಾರಣಗಳಿಂದ ಬೆಂಗಳೂರಿನಲ್ಲಿ ಹೆಚ್ಚಿನ ಉದ್ಯೋಗಕ್ಕೆ ಅನ್ಪದ ಇಲ್ಲ. ಆ ಕಾರಣಕ್ಕೆ ಆ ಭಾಗದಲ್ಲಿ ಹೆಚ್ಚಿನ ಉದ್ಯೋಗ ಬೆಳವಣಿಗೆಗೆ ಅನ್ಪದವಾದೀತು ಎಂದು ಹೇಳಲ್ಪಡುತ್ತದೆ. ಅದೇ ರೀತಿ ಹುಬ್ಬಳ್ಳಿ-ಕಾರವಾರದ್ದು. ಅದಕ್ಕೂ ಸಹ ಈಗಾಗಲೇ ಸರ್ವೇ ಆಗಿದೆ. ಸುಮಾರಾಗಿ 86 ಮೈಲಿ ಇದೆ. ಆರು ಕೋಟಿ ರೂಪಾಯಿ ವೆಚ್ಚವಾಗಬಹುದು ಎಂದು ಕಾಣುತ್ತದೆ. ಕೇಂದ್ರ ಸರ್ಕಾರದವರು ಪದೇ ಪದೇ ನಮ್ಮ ಸರ್ಕಾರಕ್ಕೆ ಮೆಟೀರಿಯಲ್ available ಇಲ್ಲ, ಅದರಿಂದ ತೊಂದರೆ ಆಗಿದೆ ಎಂದು ಹೇಳುತ್ತಾರೆ. ಆದ್ದರಿಂದ ಅದಕ್ಕೆ ತಕ್ಕ ಮಾರ್ಗವನ್ನು ಸೂಚಿಸುವುದು ಸರ್ಕಾರದವರ ಕರ್ತವ್ಯವಾಗಿದೆ. ಈ ಎರಡು ರೈಲ್ವೇಗಳ ಬೆಳವಣಿಗೆಯಿಂದ ಮಲೆನಾಡು ಪ್ರದೇಶದಲ್ಲಿ ಹೆಚ್ಚಿನ ಒಂದು ಉತ್ಪನ್ನಕ್ಕೆ ಮತ್ತು ಹೆಚ್ಚಿನ ಬೆಳವಣಿಗೆಗೆ ಅನುಕೂಲವಾಗಿ ಅಲ್ಲಿನ ಅನೇಕ ತೊಂದರೆಗಳನ್ನು ನಿವಾರಿಸಲಕ್ಕೆ ಕಾರಣವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಅದೇ ರೀತಿ ಕಾರವಾರ ಒಂದು natural harbour ಆಗಿದೆ. ಕಾರವಾರದ ಬಂದರಿನ ಬೆಳವಣಿಗೆಯ ದೃಷ್ಟಿಯಿಂದಲೂ ಈ ರೈಲ್ವೆ ಅತಿ ಆವಶ್ಯಕ ಎಂದು ಹೇಳುತ್ತೇನೆ. ಡಾಕ್ಟರ್ ನಾಗನಗೌಡರ ತಿದ್ದುಪಡಿಗೆ ಅನುಮತಿ ಕೊಡಲು ಕಾರಣ ಇಷ್ಟೆ. ಹಳೇ ಮೈಸೂರು ಎಷ್ಟೇ ಸುಂದರವಾಗಿದ್ದರೂ, ಬಂದರು ಇರಲಿಲ್ಲ. ಆದ್ದರಿಂದ ಒಂದು ದ್ವೀಪದಂತೆ ಇತ್ತು. ಆ ದೃಷ್ಟಿಯಿಂದ ಕರ್ನಾಟಕ ಆದ ಮೇಲೆ ಮೈಸೂರು ರಾಜ್ಯಕ್ಕೆ 200 ಮೈಲಿ coastal line ದೊರೆತಿದೆ. ಈಗ 200 ಮೈಲಿ ಕರಾವಳಿ ಪ್ರದೇಶ ಇರುವದರ ಮೂಲಕ ಈ ರೈಲ್ವೆ ಲೈನ್‌ನಿಂದ ವ್ಯಾಪಾರ ಸಂಬಂಧ ದೊರೆತು ತನ್ಮೂಲಕ ಎಲ್ಲ ರೀತಿಯ ಬೆಳವಣಿಗೆಯಾಗುವುದಕ್ಕೆ ಅನ್ಪದವಾಗುತ್ತದೆ. ಆದ್ದರಿಂದ ಇದರ ಕಡೆಗೆ ಹೆಚ್ಚು ಲಕ್ಷ ಕೊಡಬೇಕು.

ಇನ್ನು ಕೊಟ್ಟೂರು-ಹರಿಹರ ರೇಲ್ವೆ ಲೈನ್ ಬಗ್ಗೆ ಹೇಳುವುದಾದರೆ ಇದು ಸಾಧಾರಣವಾಗಿ 40 ಮೈಲು ಉದ್ದವಾಗುತ್ತದೆ. ಅಲ್ಲಿರತಕ್ಕ ಹಿಂದುಳಿದ ಪ್ರದೇಶಕ್ಕೆ ಒಳ್ಳೆ ಉಪಯೋಗವಾಗುತ್ತದೆ. ಇನ್ನು ಬೆಂಗಳೂರು-ಸೇಲಂ ಲೈನ್ ಬಗ್ಗೆ ಸರಕಾರದ ಮುಂದೆ ಒಂದು ಪ್ರಪೋಜರ್ ಇದೆ. ಇದರಲ್ಲಿ ಎರಡು ಮಾರ್ಗಗಳಿವೆ. ಈ ಎರಡೂ ಸೂಚನೆಗಳು ಸರಕಾರದ ಮುಂದಿವೆ. ಈ ಬಗ್ಗೆ ಸರ್ವೆ ಆದದ್ದು ಗೊತ್ತಿಲ್ಲ. ಈ ಲೈನು ಬೆಂಗಳೂರು-ವೀರರಾಜ ಪೇಟೆಯಿಂದ ತಲ್ಲಕಾಡ್‌ಗೆ ಹೋಗುತ್ತದೆ. ಬೆಂಗಳೂರು ಸೆಂಟರು ಆಗಿರುವದರಿಂದ ಇದಕ್ಕೆ ಬೆಂಗಳೂರು-ವೀರರಾಜಪೇಟೆ ರೇಲ್ವೆ ಲೈನು ಎಂದು ಹೆಸರು ಕೊಡಲಾಗಿದೆ. ನಿಜವಾಗಿಯೂ ಇದು ಬಹಳ ಪ್ರಾಮುಖ್ಯವಾದದ್ದು. ಯಾಕೆಂದರೆ ಕೊಡಗಿನಲ್ಲಿ ವಾಹನ ಸೌಕರ್ಯ ಬಹಳ ಕಡಿಮೆ ಇದೆ. ರೈಲ್ವೆ ಲೈನುಗಳಿಂದ ಕೊಡಗು ದೂರವಿದೆ. ಕೊಡಗಿನ ಅಭಿವೃದ್ಧಿಗಾಗಿ ಅಲ್ಲ ಸಂಪರ್ಕ ಏರ್ಪಡಿಸಿ ಬೆಳವಣಿಗೆಯಾಗುವಹಾಗೆ ಮಾಡಬೇಕಾದುದು ಅಗತ್ಯ. ಈ ದೃಷ್ಟಿಯಿಂದ ಕೊಡಗಿನ ಸಂಪರ್ಕ ಬೆಳೆಯಬೇಕು ಮತ್ತು ಕೊಡಗಿನಲ್ಲಿರತಕ್ಕ ಸಾಧನ ಸಂಪತ್ತು ಅಲ್ಲಿಯ ಉತ್ಪತ್ತಿ ಎಲ್ಲರಿಗೂ ಲಭ್ಯವಾಗಬೇಕೆಂಬ ಉದ್ದೇಶದಿಂದ ಈ ಮಾರ್ಗರಚನೆಗೆ ಹೆಚ್ಚು ಗಮನ ಕೊಡಬೇಕು.

ಕೊನೆಯದಾಗಿ ಗದಗ್-ರಾಯಚೂರು ರೇಲ್ವೆ ಮಾರ್ಗದ ಬಗ್ಗೆ ಒಂದು ಮಾತು ಹೇಳಬೇಕೆಂದಿದ್ದೇನೆ. 1908 ಅಥವಾ 1909ನೇ ಇಸವಿಯಲ್ಲಿ ಈ ಬಗ್ಗೆ ಒಂದು ರಫ್ ಸರ್ವೇ ಆಗಿದೆ ಎಂದು ನಾನು ಕೇಳಿದ್ದೇನೆ. ಇದು ಸುಮಾರು 140 ಮೈಲು ಉದ್ದವಾಗಬಹುದು. ನೈಜಾಮ ಇಲಾಖೆಯಲ್ಲಿದ್ದ ಹಿಂದುಳಿದ ಪ್ರದೇಶದಲ್ಲಿಯೂ ಮತ್ತು ಸ್ವಲ್ಪ ಕಡಿಮೆ ಹಿಂದುಳಿದ ಧಾರವಾಡ ಜಿಲ್ಲೆಯಲ್ಲಿಯೂ ಈ ಮಾರ್ಗ ಹೋಗುತ್ತದೆ. ಈ ಪ್ರದೇಶ ಫಲವತ್ತಾದ ಪ್ರದೇಶವಾಗಿದೆ. ಅಲ್ಲಿಯ ಸರಕುಗಳನ್ನು ಸಾಗಿಸುವ ಜನರ ಓಡಾಟಕ್ಕಾಗಿ ಈ ಲೈನು ಆವಶ್ಯಕವಾಗಿದೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ಈ ಆರು ರೇಲ್ವೆ ಲೈನುಗಳ ಬಗ್ಗೆ ಸಾಧಾರಣವಾಗಿ ಮಾಹಿತಿ ತಮಗೆಲ್ಲರಿಗೆ ತಿಳಿಸಿದ್ದೇನೆ. ಇನ್ನೂ ಹೆಚ್ಚಿನ ಮಾಹಿತಿಯನ್ನು ಬೇರೆ ಸದಸ್ಯರು ಹೇಳಬಹುದು. ಸರಕಾರಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ವಿಷಯದಲ್ಲಿ ಸದಸ್ಯರುಗಳಿಂದ ಸರಕಾರಕ್ಕೆ ಏನು ಬೆಂಬಲ ಬೇಕೋ ಅದನ್ನು ಕೊಡಲು ಸದಸ್ಯರು ಸಿದ್ಧರಾಗಿದ್ದಾರೆ. ಇಂಥ ಸುಸಮಯದ ಸದುಪಯೋಗ ಮಾಡಿಕೊಂಡು ಸರಕಾರದವರು ಒಂದುಸಾರೆ ಬಿಟ್ಟು ಹತ್ತುಸಾರೆಯಾದರೂ ಸಹ ದಿಲ್ಲಿಗೆ ಹೋಗಿ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದನ್ನು ಯಶಸ್ವಿಯಾಗಿ ಮಾಡಿ ದೇಶದ ಜನತೆಯ ಹೃತ್ಪೂರ್ವಕವಾದ ಹರಿಕೆಗೆ ಪಾತ್ರರಾಗಬೇಕೆಂದು ನಾನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಕೆ. ಪಿ. ಗದಗ್ (ಗದಗ್).—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ದೊಡ್ಡಮೇಟಿಯವರು ತಂದಿರುವ ತರಾಪಿಗೆ ಒಂದು ತಿದ್ದುಪಡಿಯನ್ನು ನಾನು ಕೊಟ್ಟಿದ್ದೇನೆ. ಈ ತರಾಪಿನಲ್ಲಿ ಸೂಚಿಸಿರುವ ಆರು ರೇಲ್ವೆ ಲೈನುಗಳಲ್ಲಿ ಯಾವುದು ಅತಿ ಮಹತ್ವದ್ದಾಗಿದೆಯೋ, ಉದ್ಯಮದ ದೃಷ್ಟಿಯಿಂದ ಅತ್ಯಂತ ಮುಖ್ಯವಾಗಿದೆಯೋ ಅಂಥಾದ್ದನ್ನಾದರೂ ಕನಿಷ್ಠ ಪಕ್ಷಕ್ಕೆ ಕೈಕೊಳ್ಳಬೇಕೆಂದು ನನ್ನ ಉಪಸೂಚನೆಯಲ್ಲಿದೆ. ಈ ಆರು ರೇಲ್ವೆ ಲೈನುಗಳ ಬಗ್ಗೆ ಒಂದು ತರಾವು ಪಾಸ್‌ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಿದರೆ ಅಪ್ಪು ಪರಿಣಾಮವಾಗಲಿಕ್ಕಿಲ್ಲ ಎನ್ನುವ ದೃಷ್ಟಿಯಿಂದ ಮಹತ್ವದ ಮತ್ತು ಪ್ರಾಮುಖ್ಯವಾದ ಎರಡು ರೇಲ್ವೆ ಲೈನುಗಳ ಬಗ್ಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ನಾನು ಕೇಳಿಕೊಂಡಿದ್ದೇನೆ. ಹುಬ್ಬಳ್ಳಿ-ಕಾರವಾರ ಮತ್ತು ಹಾಸನ-ಮಂಗಳೂರು ಈ ಎರಡು ರೇಲ್ವೆ ಲೈನುಗಳು ಮಹತ್ವದ್ದಾಗಿವೆ. ಯಾಕಂದರೆ ಈ ಎರಡೂ ಮಾರ್ಗಗಳು ಪೋರ್ಟ್ ಅಂದರೆ ಬಂದರಕ್ಕೆ ತಲ್ಪುತ್ತವೆ. ಬಂದುರಗಳ ಮುಖಾಂತರ ಆಗುವ ವ್ಯವಹಾರ ಉದ್ಯಮಕ್ಕೆ ಈ ಮಾರ್ಗವು ಅತ್ಯಾವಶ್ಯಕವಾಗಿದೆ. ಆದುದರಿಂದ ಯಾವದೇ ಕಾರಣದ ದೆಶೆಯಿಂದ ಈ ಎರಡೂ ರೇಲ್ವೆ ಮಾರ್ಗ ರಚನೆಯ ಕಾರ್ಯವನ್ನು ಮುಂದಕ್ಕೆ ಹಾಕಬಾರದು. ಮತ್ತು ತೀವ್ರ ಕೈಕೊಳ

ಬೇಕೆಂಬ ಉದ್ದೇಶದಿಂದಲೇ ಈ ತಿದ್ದುಪಡಿಯನ್ನು ತಂದಿದ್ದೇನೆ. ಹೀಗೆ ನಾನು ಹೇಳುವದರಿಂದ ಉಳಿದ ನಾಲ್ಕು ರೇಲ್ವೆ ಲೈನುಗಳ ರಚನೆಯ ಬಗ್ಗೆ ನಾನು ವಿರೋಧಿಯಾಗಿದ್ದೇನೆ, ಬೇಡ ಎಂದು ಅನ್ನುತ್ತೇನೆ ಎಂದು ಅಲ್ಲ. ಉಳಿದ ನಾಲ್ಕು ಮಾರ್ಗಗಳನ್ನು ರಚಿಸಿದರೂ ಒಳ್ಳೆಯದೇ ಆಗುತ್ತದೆ. ಆದರೆ ಕೇಂದ್ರ ಸರಕಾರದವರು ಇತ್ತೀಚೆಗೆ ಕೊಟ್ಟಿರುವ ಹೇಳಿಕೆಯ ಪ್ರಕಾರ ನೋಡಿದರೆ ಮೂರನೇ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮದಲ್ಲಿ ಹೊಸ ರೇಲ್ವೆ ರಚನೆಯ ನಿರ್ದೇಶವಿಲ್ಲ. ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ಕ್ಕೆ ಮುಖ್ಯಮಂತ್ರಿಗಳು ಹೋಗಿದ್ದರು. ಚರ್ಚೆ ಮಾಡಿದ್ದಾರೆ. ಪತ್ರಿಕೆಯಲ್ಲಿ ಮೊನ್ನೆ ಬಂದಿರುವ ಸುದ್ದಿಯಿಂದ ನನಗೆ ಹೀಗೆ ಅನಿಸುತ್ತಿದೆ. ಈಗಾಗಲೇ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಕೊಂಡಿರುವ ಕಾರ್ಯಗಳನ್ನು ಮಾತ್ರ ಮುಂದು ವರಿಸುತ್ತಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಹೊಸ ರೇಲ್ವೆ ಮಾರ್ಗ ರಚನೆಯೂ ಸೇರ್ಪಡೆಯಾಗಿಲ್ಲ ಎಂಬುದು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯಿಂದ ಗೊತ್ತಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಈ ಎರಡು ಅತಿ ಮಹತ್ವದ ರೇಲ್ವೆ ಲೈನುಗಳ ರಚನೆಯ ಬಗ್ಗೆ ಯಾವ ಕಾರಣವನ್ನೂ ಕುಂಟ ನೆಪವನ್ನೂ ಹೇಳದೇ ಇರುವ ಹಾಗೆ ಒತ್ತಾಯ ಮಾಡಬೇಕೆಂದು ಶ್ರೀಮಾನ್ ದೊಡ್ಡಮೇಟಿಯವರು ಹೇಳಿದರು. ಒಂದು ತರಾವು ಅಥವಾ ಹೇಳಿಕೆಯಿಂದ ಅಷ್ಟು ಪ್ರಯೋಜನವಿಲ್ಲ. ಶರಾವತಿ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಎಷ್ಟು ಮಹತ್ವ ಕೊಟ್ಟಿದ್ದಾರೆಯೋ ಅಷ್ಟೇ ಮಹತ್ವವನ್ನು ಈ ಎರಡೂ ರೇಲ್ವೆ ಲೈನುಗಳ ರಚನೆಯ ಬಗ್ಗೆ ಕೊಡುವಹಾಗೆ ಕೇಂದ್ರ ಸರಕಾರದ ಮೇಲೆ ಒತ್ತಾಯ ತರಬೇಕು. ಇದೊಂದು ಸುಸಮಯವಿದೆ. ಆದರಿಂದಲೇ ಈ ತಿದ್ದುಪಡಿಯನ್ನು ನಾನು ತಂದಿದ್ದೇನೆ. ಈ ಎರಡು ರೇಲ್ವೆ ಲೈನ್ ರಚನೆಗೆ ಪ್ರಾಮುಖ್ಯತೆ ಕೊಡಬೇಕು. ಉಳಿದ ನಾಲ್ಕು ಲೈನುಗಳನ್ನು ಕೊಟ್ಟರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಕನಿಷ್ಟಪಕ್ಷ ಈ ಎರಡನ್ನು ಮಂಜೂರು ಮಾಡಬೇಕು. ಯಾಕೆಂದರೆ ಇವು ಬಹಳ ಮಹತ್ವವಾಗಿವೆ.

ಅಧ್ಯಕ್ಷರೆ, ನಮ್ಮ ಪಂಚವಾರ್ಷಿಕ ಯೋಜನೆಗಳ ವೈಫಲ್ಯಗುರಿ ಏನಿದೆ ಎಂದರೆ ದೇಶದ ಸಾಂಪತ್ತಿಕ ಆರ್ಥಿಕಸ್ಥಿತಿ ಸುಧಾರಣೆಯಾಗಬೇಕು, ದೇಶದಲ್ಲಿಯ ಉದ್ಯಮ ವ್ಯವಹಾರ ಬೆಳವಣಿಗೆಯಾಗುವಂತೆ ಮಾಡುವುದು, ಉತ್ಪತ್ತಿ ಹೆಚ್ಚಿಸುವುದು ಇವೇ ಮುಖ್ಯ ಗುರಿಯಾಗಿವೆ. ಉದ್ಯಮಗಳ ಬೆಳವಣಿಗೆಗೆ ಅತಿ ಮುಖ್ಯವಾಗಿ ಬೇಕಾದುದು ಏನೆಂದರೆ communications, water power, finance ಇವು ಅವಶ್ಯವಾಗಿ ಬೇಕು. ಈ ಸಂದರ್ಭದಲ್ಲಿ communicationsಗಳಲ್ಲಿ ರೇಲ್ವೆ ಲೈನ್ ಒಂದು ಅತ್ಯಂತ ಅವಶ್ಯಕವಾದಂಥಾದ್ದಾಗಿದೆ. ಕೈಗಾರಿಕಾ ಬೆಳವಣಿಗೆಗೆ ರೈಲ್ವೆ ಲೈನ್ communication ನಿಂದ ಅನುಕೂಲವಾಗುತ್ತದೆ. ಒಂದು ವೇಳೆ ಅದು ಇಲ್ಲವಿದ್ದರೆ ಬೆಳವಣಿಗೆಗೆ ಅಷ್ಟು ಪ್ರೋತ್ಸಾಹ ಸಹಾಯ ದೊರೆಯುವದಿಲ್ಲ. ಅಡಚಣೆ ತೊಂದರೆಯಾಗುತ್ತದೆ ಎಂಬುದು ಎಲ್ಲರ ಅನುಭವಕ್ಕೆ ಮತ್ತು ಗಮನಕ್ಕೆ ಬಂದಂಥ ಸಂಗತಿಯಾಗಿದೆ.

4-30 P.M.

ಅದರಲ್ಲಿ ಎರಡು ರೈಲ್ವೆ ಲೈನುಗಳಿಗೆ ವಿಶೇಷವಾದ ಕಾರಣ ಮತ್ತು ವಿಶೇಷವಾದ ಪರಿಸ್ಥಿತಿ ಮತ್ತು ವೈಶಿಷ್ಟ್ಯ ಇದೆ. ಅದು ಹಾಸನದಿಂದ ಮಂಗಳೂರು ಮತ್ತು ಹುಬ್ಳಿಯಿಂದ ಕಾರವಾರಕ್ಕೆ ಹೋಗತಕ್ಕ ಲೈನುಗಳು ಮಂಗಳೂರು ಒಂದು ಪೋರ್ಟ್ ಆಗುತ್ತದೆ. ಅಲ್ಲಿ ರೈಲ್ವೆಲೈನ್ ಇಲ್ಲದಿದ್ದರೆ ಪೋರ್ಟ್ ಬೆಳವಣಿಗೆ ಆಗುವುದಿಲ್ಲ. ಕಾಂಡ್ಲದೊಳಗೆ ಒಂದು ಪೋರ್ಟ್ ಆಗಬೇಕಾದರೆ ಒಂದು ವಿಶೇಷ ಪರಿಸ್ಥಿತಿ ಬರುವುದಕ್ಕೆ ಕಾರಣವಾಯಿತು. ರೈಲ್ವೆಲೈನ್ ಹಾಕದಿದ್ದರೆ 10-15 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಪೋರ್ಟ್ ಬೆಳವಣಿಗೆ ಆಗುವುದಕ್ಕೆ ಶಕ್ಯವಿಲ್ಲ. ಆ ಪೋರ್ಟಿನಿಂದ ಅನೇಕ ಸಾಮಗ್ರಿಗಳು ಹೋಗುವಂತಾದ್ದು ಇವೆ. ಮಾನ್ಯ ಮಿತ್ರರು ಹೇಳಿದಂತೆ ಎಕ್ಸ್‌ಪೋರ್ಟ್ ಆಗುವಂಥಾದ್ದು ಎಂದರೆ ಏಲಕ್ಕಿ, ಮೆಣಸು, ಚೆಕ್ಕ್ಚೆಲ್ ಮತ್ತು ಇತರ ಸಾಮಾನುಗಳು ಎಕ್ಸ್‌ಪೋರ್ಟ್ ಆಗುವುದೂ ಇದೆ. ಮತ್ತು ಅಲ್ಲಿಗೆ ಬರುವಂಥಾದ್ದೂ ಇದೆ. ರೈಲ್ವೆಲೈನ್ ಇಲ್ಲದಿದ್ದರೆ ಏನಾಗುತ್ತದೆ ಎಂದರೆ ನೂರಾರು ಮೈಲಿ ಸುತ್ತುವರಿದು ಹೋಗಬೇಕಾದರೆ ಖರ್ಚು ಬಹಳ ಬರುತ್ತದೆ. ಕಾರ್ಟೇಜ್ ಹೋಗುವುದು ಬರುವುದು ಹೆಚ್ಚು ಖರ್ಚು ಬಂದು ಗ್ರಾಹಕರ ಮೇಲೆ ಬದ್ದು ಆ ಸಾಮಾನುಗಳನ್ನು ಮಾಡುವವರ ಮೇಲೆ ಹೆಚ್ಚು ಖರ್ಚು ಬಂದು ವ್ಯವಹಾರ ಉದ್ಯಮಗಳಲ್ಲಿ ಕಾಂಪಿಟಿಷನ್ ಮಾಡಲು ತೊಂದರೆಯುಂಟಾಗುತ್ತದೆ. ಯಾವ ಉದ್ಯಮವೇ ಇರಲಿ ವ್ಯವಹಾರವೇ ಇರಲಿ ಬೊಂಬಾಯಿನವರಿಗೆ, ಮದ್ರಾಸಿನವರಿಗೆ ಏನು ಅನುಕೂಲತೆಗಳು ಇರುತ್ತವೆಯೋ ಕೊಚಿನ್‌ನಲ್ಲಿ ಏನು ಅನುಕೂಲತೆಗಳು ಇರುತ್ತವೆಯೋ ಅವು ನಮ್ಮ ಪ್ರಾಂತದಲ್ಲಿ ಇಲ್ಲದಿದ್ದರೆ ಈ ವ್ಯವಹಾರದಲ್ಲಿ ಕಾಂಪಿಟಿಶನ್ ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥಾ ವ್ಯವಹಾರ ಉದ್ಯಮಗಳ ಬೆಳವಣಿಗೆಯಾಗುವುದಿಲ್ಲ. ಅಂಥಾ ಪರಿಸ್ಥಿತಿ ಬರುತ್ತದೆ.

ಶ್ರೀ ದೊಡ್ಡಮೇಟಿಯವರು ಹೇಳಿದರು ಹುಬ್ಳಿಯಿಂದ ಕಾರವಾರಕ್ಕೆ 6 ಕೋಟಿ ರೂಪಾಯಿಗಳು, ಹಾಸನದಿಂದ ಮಂಗಳೂರಿಗೆ 8 ಕೋಟಿ ಖರ್ಚಾಗುತ್ತದೆ ಎಂದು. ಅದು 10 ಕೋಟಿ ಇದ್ದೀತು, 12 ಕೋಟಿ ಇದ್ದೀತು, ಖರ್ಚಿನದು ಇದಕ್ಕೆ ಸಂಬಂಧವಿಲ್ಲ. ವರ್ತಕರಿಗೆ ವ್ಯವಹಾರ ಉದ್ಯಮಗಳಿಗೆ ಏನೇನು ಲುಕ್ಸಾನು ಆಗುತ್ತದೆ ಒಂದೊಂದು ಎಕ್ಸ್‌ಪೋರ್ಟ್ ಆಗಬಹುದಕ್ಕೆ, ಐಟಮ್ ಮೇಲೆ ಪೋರ್ಟ್ ಮೂಲಕ ರೈಲ್ವೆ ಮೂಲಕ ಎಷ್ಟು ಖರ್ಚು ಬೀಳುತ್ತದೆ, ಎಂಬುದನ್ನು ಲೆಖ್ಖಹಾಕಿ ನೋಡಿದರೆ, ರೈಲ್ವೆ ಲೈನಿಗೆ ಎಷ್ಟು ಬೀಳುತ್ತದೋ ಅಷ್ಟು ದುಡ್ಡು ಎರಡು ವರ್ಷದೊಳಗೆ ನಮ್ಮ ಮೇಲೆ ಬೀಳುತ್ತದೆ. ಅದನ್ನು ನಾನು ರಫ್ ಆಗಿ ಹೇಳುತ್ತೇನೆ. ಅಂಕಿ ಸಂಖ್ಯೆಗಳನ್ನು ಹಾಕುವುದು ಅಷ್ಟು ಸುಲಭವಲ್ಲ. ಎಕ್ಸ್‌ಪೋರ್ಟ್ ಯಾವುದು ಆಗುತ್ತದೆ, ಇಂಪೋರ್ಟ್ ಯಾವುದು ಆಗುತ್ತದೆ, ಮಾರ್ಕೆಟಿಂಗ್ ರೇಟ್ ಎಷ್ಟೆಷ್ಟು ಹೆಚ್ಚು ಬೀಳುತ್ತದೆ, ಅದನ್ನು ಲೆಖ್ಖ ಮಾಡಬೇಕಾದರೆ, ಸ್ಪೆಷಲ್ ಸ್ಟಡಿ ಮಾಡಿದರೆ ತಿಳಿಯುತ್ತದೆ. ಅಂತೂ ರೈಲ್ವೆ ಅಭಾವದಿಂದ ಪೋರ್ಟ್ ಅಭಾವದಿಂದ ಇಲ್ಲಿನ ಗ್ರಾಹಕರ ಮೇಲೆ ಹೆಚ್ಚು ದುಡ್ಡು ಬದ್ದು ಸಾಮಾನು ಕಳುಹಿಸುವವರಿಗೆ ಹೆಚ್ಚು ಖರ್ಚು ಬಂದು ಲಾಭ ಸಿಕ್ಕದೆ ಇರತಕ್ಕ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಉದ್ಯಮ ವ್ಯವಹಾರಗಳಿಗೆ ರೈಲ್ವೆಲೈನು ಅತ್ಯಂತ ಅವಶ್ಯಕ ಇರುವದರಿಂದ ಕೇಂದ್ರ ಸರ್ಕಾರದವರ ಮೇಲೆ ಯಾವ ಪರಿಣಾಮ ಮಾಡಿದರೆ ಫಲಕಾರಿಯಾಗುತ್ತದೆ, ಅದನ್ನು ಮಾಡಿ ಈ ಎರಡು ರೈಲ್ವೆ ಲೈನುಗಳನ್ನು ಮುಖ್ಯವಾಗಿ ಜಾಗ್ರತೆ ತೆಗೆದುಕೊಂಡರೆ,

(ಶ್ರೀ ಕೆ. ಪಿ. ಗದಗ್)

ನಾನು ಸಂತೋಷಪಡುತ್ತೇನೆ. ಇದು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಆಗದಿದ್ದರೆ ಮೂರನೇ ಪಂಚವಾರ್ಷಿ ಯೋಜನೆಯಲ್ಲಿ ಆದರೂ ಅದಕ್ಕೆ ಹೆಚ್ಚು ಮಹತ್ವ ಕೊಟ್ಟು, ಹೆಚ್ಚು ಗಮನ ಕೊಟ್ಟು ಆ ಎರಡು ರೈಲ್ವೆಲೈನುಗಳನ್ನು ಮಾಡುವಂತೆ ಮಾಡಬೇಕು. ಶ್ರೀ ಮರಿಯಪ್ಪನವರು ಹೇಳಿದರು, ಪೋರ್ಟ್ ಆದ ಮೇಲೆ ರೈಲ್ವೆಲೈನ್ ಹಾಕುವುದಕ್ಕೆ ಕ್ರಮ ಕೈಗೊಳ್ಳುತ್ತಾರೆ ಎಂದು ಆಶ್ವಾಸನೆ ಇದೆ ಎಂದು, ಅದು ನಿಶ್ಚಯವಾಗಿ ಆಗುತ್ತದೆಯೋ ಅಥವಾ ಇಲ್ಲವೋ ಎಂಬ ಅನುಮಾನವಿದೆ. ಫೈನಾನ್ಸ್ ಮಿನಿಸ್ಟರು ಈಗ ಇಲ್ಲಿ ಇದ್ದರೆ ನೆಟ್ಟಗಿತ್ತು. ಅವರು ಮೊನ್ನೆ ಡೆವಲಪ್‌ಮೆಂಟ್ ಕೌನ್ಸಿಲ್ಲಿಗೆ ಹೋದಾಗ ನಡೆದ ತೀರ್ಮಾನದಪ್ರಕಾರ ಹೊಸದಾಗಿ ರೈಲ್ವೆಲೈನ್ ಹಾಕುವುದನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುವುದಿಲ್ಲ ಎನ್ನುವ ವಿಚಾರ ಫೈನಲ್ ಆಗಿಲ್ಲ ಎಂದು ಹೇಳಿದರು. ಅದರೆ ನಿಶ್ಚಯವಾಗಿ ಇದನ್ನು ಅದರೂ ತೆಗೆದುಕೊಳ್ಳುತ್ತಾರೆಂದು ನಾನು ಅಷ್ಟೊಂದು ನಿಶ್ಚಯದಿಂದ ಹೇಳಲಾರೆ. ಶ್ರೀಮಾನ್ ಮರಿಯಪ್ಪನವರು ಹೇಳಿದಂತೆ ಇದ್ದರೆ ಸಂತೋಷಪಡುತ್ತೇನೆ. ಆದರೆ ನಾನು ಸ್ಟೇಟ್‌ಮೆಂಟ್ ನೋಡಿದಂತೆ ನನಗೆ ಅನುಮಾನವಾಗುತ್ತದೆ. ಮುಖ್ಯ ಮಂತ್ರಿಗಳಿಗೆ ಅದು ಅಧಿಕೃತವಾಗಿ ಗೊತ್ತಿರಬಹುದು. ಈ ಬಗ್ಗೆ ಏನು ಸಂಗತಿ ಇದೆ ಎಂಬುದನ್ನು ತಮ್ಮ ಹೇಳಿಕೆಯಲ್ಲಿ ಹೇಳುತ್ತಾರೆ ಎಂದು ನಾನು ಆಶೆ ಮಾಡುತ್ತೇನೆ. ಅದೇ ಪ್ರಕಾರವಾಗಿ ಹಾಸದದಿಂದ ಮಂಗಳೂರಿಗೆ ಮಾತ್ರ ಒಂದು ರೈಲ್ವೆಲೈನು ಅದರೆ ನಾನು ತೃಪ್ತಿಪಡುವುದಿಲ್ಲ. ಅದರಲ್ಲಿ ಹುಬ್ಬಳ್ಳಿಯಿಂದ ಕಾರವಾರಕ್ಕೆ ಹಾಕುವುದು ಬಹಳ ಮಹತ್ವದ್ದು ಇದೆ. ಬರೇ ನಮ್ಮ ಧಾರ್ವಾಡ ಡಿಸ್ಟ್ರಿಕ್ಟ್‌ನಲ್ಲಿ ಹುಬ್ಬಳ್ಳಿ ಇದೆ ಎನ್ನುವ ವಿಚಾರಕ್ಕೆ ಹೇಳುತ್ತಾ ಇಲ್ಲ. ಕಾರವಾರ ಏನಿದೆ ಅದು ಡೆವಲಪ್ ಆಗಬೇಕಾದರೆ ರೈಲ್ವೆಲೈನ್ ಮತ್ತು ಪೋರ್ಟ್ ಆಗದ ಹೊರತು ಬೆಳವಣಿಗೆ ಆಗುವುದಿಲ್ಲ. ಯಾವ ಸೌಲಭ್ಯವೂ ಸಿಕ್ಕುವುದಿಲ್ಲ. ಈ ಒಂದು ದೃಷ್ಟಿಯಿಂದ ಹುಬ್ಬಳ್ಳಿಯಿಂದ ಕಾರವಾರದ ಲೈನ್ ಏನಿದೆ, ಅದು ಬಹಳ ಮಹತ್ವದ್ದು ಇದೆ. ಕಾರವಾರದೊಳಗೆ ಇಂಡಸ್ಟ್ರಿ ರಿಸೋರ್ಸಸ್ ವಿಶೇಷ ಇದೆ. ಇಂಡಸ್ಟ್ರಿ ಡೆವಲಪ್ ಮಾಡುವುದು ಜೊತೆಗೆ ನಡೆಯುತ್ತದೆ. ಈಗಾಗಲೇ ದಾಂಡೇಲಿಯಲ್ಲಿ ಪೆಸ್ಟ್‌ಕೋಸ್ಟ್ ಪೇಪರ್ ಫೆರೋ ಮ್ಯಾಂಗನೀಸ್ ಪ್ಲಾಂಟ್ ಇದೆ. ಇನ್ನೂ ಇತರೆ ಕೆಲವು ಆಗುವುದೂ ವಿಚಾರ ನಡೆದಿದೆ. ಇದೂ ಅಲ್ಲದೆ ಹುಬ್ಬಳ್ಳಿ, ಬೆಳಗಾಂ, ಸೊಲ್ಲಾಪುರದಲ್ಲಿಯೂ, ಸಹ ರೈಲ್ವೆಲೈನ್ ಆದರೆ ಪೋರ್ಟ್ ಏರ್ಪಾಟಿನ ವ್ಯವಹಾರದಿಂದ ಅವರಿಗೂ ಅನುಕೂಲವಾಗುತ್ತದೆ. ಇನ್ನೊಂದು ಮುಖ್ಯವಾದ ವಿಷಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಏನೆಂದರೆ ಕಾರವಾರದಿಂದ ಮ್ಯಾಂಗನೀಸ್ ಓರ್ 8 ಲಕ್ಷ ಟನ್ ಎಕ್ಸ್‌ಪೋರ್ಟ್ ಆಗುತ್ತದೆ ಎಂದು ನಾನು ಹೇಳುತ್ತೇನೆ. ಇನ್ನು ರೈಲ್ವೆಲೈನ್ ಇದ್ದರೆ ಇದಕ್ಕಿಂತ ಹೆಚ್ಚು ಎಕ್ಸ್‌ಪೋರ್ಟ್ ಆಗಲಿಕ್ಕೆ ಕಾರಣವಾಗುತ್ತದೆ. ಆದ್ದರಿಂದ ಹುಬ್ಬಳ್ಳಿ—ಕಾರವಾರ ರೈಲ್ವೆಲೈನಿಗೆ ಹೆಚ್ಚು ಗಮನಕೊಡುವುದು ಅವಶ್ಯ ಇದೆ. ಏತಕ್ಕೆಂದರೆ ಐರನ್ ಮತ್ತು ಮ್ಯಾಂಗನೀಸ್ ಓರ್‌ನಿಂದ ಫಾರಿನ್ ಎಕ್ಸ್‌ಚೇಂಜ್ ನಮಗೆ ದೊರೆಯತಕ್ಕ ಸೌಲಭ್ಯ ಇದೆ. ರೈಲ್ವೆಲೈನ್ ಯಾವುದು ಅಭಾವ ಇದೆ ಅಲ್ಲಿ ನೀವು ರೈಲ್ವೆ ಹಾಕಬೇಕು. ಫಾರಿನ್ ಎಕ್ಸ್‌ಚೇಂಜ್ ಗಳಿಸಿಕೊಡುವುದಕ್ಕೆ ರೈಲ್ವೆಲೈನ್ ಹಾಕುವುದಿಲ್ಲ ಎಂದು ಹೇಳಿದರೆ ಅದು ಸರಿಯಾಗಿ ಹೊಂದುವುದಿಲ್ಲ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಇಡೀ ಹಿಂದೂಸ್ಥಾನದಲ್ಲಿ 840 ಮೈಲು ರೈಲ್ವೆಲೈನುಗಳನ್ನು ಕನ್‌ಸ್ಟ್ರಕ್ಟ್ ಮಾಡುವುದಕ್ಕೆ ಏರ್ಪಾಟು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಶ್ರೀಮಾನ್ ಹನುಮಂತಯ್ಯನವರು ಈ ವಿಷಯವನ್ನು ಆಸ್ಥೆಯಿಂದ ಪ್ರತಿಪಾದಿಸಿದ್ದಾರೆ. ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಕುಳಿತುಕೊಂಡು ಇಂಟಿಗ್ರೇಷನ್ ಆದಮೇಲೆ ದಕ್ಷಿಣ ಹಿಂದೂಸ್ಥಾನದಲ್ಲಿ ರೈಲ್ವೆಲೈನ್ ಹಾಕುವ ವಿಷಯವನ್ನು ವ ನಸ್ಸಿಗೆ ತಿಳಿಯುವ ಹಾಗೆ ಮಾಡಿದ್ದಾರೆ. ಅದಕ್ಕೆ ನಾನು ಹೇಳಿಕೊಳ್ಳುವುದು ಇಷ್ಟೆ. ಯಾವುದೇ ಒಂದು ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಕೇಂದ್ರ ಸರ್ಕಾರದ ಮೇಲೆ ಈ ಎರಡು ರೈಲ್ವೆಲೈನು ಆಗುವಂತೆ ಮಾನ್ಯ ಸಭೆಯವರೆಲ್ಲರೂ ಬೆಂಬಲ ಕೊಟ್ಟು ಪ್ರಾಸುಮಾಡುವ ಒಂದು ಠರಾವಿನ ಮೂಲಕ ಮಾಡುತ್ತಾರೆಂದು ಆಶೆ ಮಾಡುತ್ತೇನೆ. ಎಲ್ಲಾ ಲೈನುಗಳನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ, ಎನ್ನುವ ಉದ್ದೇಶದಿಂದ ನಾನು ತಿದ್ದುಪಡಿಯನ್ನು ತಂದಿದ್ದು ಆಗಿದೆ. ಡಾ. ನಾಗನ ಗೌಡರ ಅಮೆಂಡ್‌ಮೆಂಟ್ ನನ್ನ ಅಮೆಂಡ್‌ಮೆಂಟ್ ಗಿಂತ ಉತ್ತಮ ಇರುವುದರಿಂದ ಆ ಅಮೆಂಡ್‌ಮೆಂಟಿಗೆ ಮನವರಿಕೆ ಆಯಿತು ಎಂದರೆ ನನ್ನ ಅಮೆಂಡ್‌ಮೆಂಟ್ ಹೊರಗೆ ತೆಗೆದುಕೊಂಡು ಅವರ ಅಮೆಂಡ್‌ಮೆಂಟಿಗೆ ನನ್ನ ಅನುಮೋದನೆಯನ್ನು ಕೊಡುತ್ತೇನೆ.

†Dr. R. NAGAN GOWDA.—Mr. Speaker, Sir, I have given notice of an amendment to the resolution; "That after the words 'constructing the following railway lines', add the words:

> "especially Nos. 1 and 2 in view of the fact that the Port of Mangalore is going to be developed as an all-weather port and Karwar as an Intermediary port."

Sir, much has been said already about the necessity for laying these six railway lines. It is necessary therefore that we should have these railway lines. We have been agitating for them from a long time. But now it is more important, and it is absolutely important that we should have at least two of these railway lines, the Hassan—Mangalore Railway line and the Hubli—Karwar railway line. It is a well-known fact that in South India, Mysore is the richest in mineral wealth. We have more iron ore. We have the finest quality of iron ore, probably the finest in the world, and we have got vast deposits of manganese ore, not to say of other minerals. The richness of this mineral wealth was noticed as long back as 1907, almost more than half a century ago and the British

erected a railway line from Hubli to Castle Rock as long ago as 1907 to enable the transportation of manganese ore. So even then, they had realised the necessity for a railway line. At that time, ore from the mines of Sandur and Hospet could be transported from the pit mouth to the harbour of Marmagoa. But unfortunately today we do not have the Marmagoa port in our control. But the necessity for export of iron ore is felt all the more. In the last few years, we have exported a large quantity of iron and manganese ore – iron ore especially—and today we are thinking of transporting millions of tons of iron ore to foreign countries.

The cost of iron ore at the pit's mouth is almost a pittance. It is some where near three to four rupees per ton. This might come as a surprising truth to many of the Hon'ble Members here. More than three tons of iron ore would make almost 1½ tons of pig iron. Such a valuable iron ore is sent away at such a small price. But the cost of transport has become a heavy burden on this iron ore. Where are we sending this iron ore today? From Hospet and Sandur, this iron ore is carried in heavy lorries over a distance of 250 miles and more to the Karwar port. Or in the alternative, iron ore is sent all the way to Guntakal and then to Dharmavaram, Pakala and then to Guddalur Port. The Japanese merchants who are interested in this ore say that they would like to have a connected route all the way from the mine to the port. What is the distance from Hospet to this port of Cuddalur? It is over 550 miles. Just think of the immense waste of energy, time and cost for transporting this ore. Whereas this ore could be put in Karwar port, merely over a distance of 90 miles to Karwar. Within 180 miles, we will be able to put this ore into the Port and then on into the ship. Instead of that we are going all the way to Cuddalur, a distance of 550 miles. I need not dwell on the enormous waste of energy and all that.

Why are we sending this iron ore over such long distances? Because, we are obtaining the very much needed foreign exchange that we require to purchase heavy machinery that are needed for our factories. Sir, the mover of this resolution, Sri Dodmeti, was not sure what was going to happen in the Third Plan. Sometime ago a description of things–what to expect in the Third Plan was given in the newspapers. It is proposed, I am told, that 1,200 miles of railway line will be constructed and 1,200 crores of rupees have been set apart. Of these not one mile of these new railway lines will be in South India. There is no need to complain against North India. We all live in one country. But where there is the necessity for a railway line, we must build the railway line. The necessity for this railway line has not been recognised by the Government of India. And, does the Government of India stand to lose anything on this? The S. T. C. is organised by the Government of India and they are making huge profits by the export of this iron ore. They not only get foreign exchange, but they also make profit. What does our State Government get? For every ton of ore that is mined in any of these mines, they get a pittance of one rupee as royalty. Whereas, the State Trading Corporation organised by the Government of India gets a profit of 8 to 0 times and even 15 times the royalty that the State Government gets. We may at this time think of the cost of the railway line either from Mangalore to Hassan or from Karwar to Hubli. Sir, when compared to the profit that STC gets and the amount of freight that the railways get, the cost of the construction of these lines would be nothing and this may be paid off within a decade. So, in the interest of fast transportation, in the interest of saving money and in the interest of earning foreign exchange, it is necessary that we should have these railway lines from Karwar to Hubli and also from Mangalore to Hassan without any further delay. Out of the 1,200 miles that is proposed to be constructed during the plan period, we should at least have 100 miles at Karwar and 100 miles at Mangalore. Some time back, I had occasion to speak to the

(DR. R. NAGAN GOWDA)

Deputy Minister for Railways when he visited Hospet and when we told him about the urgency about this, he said they were more interested in the Bangalore Salem line. He hails from Salem. It is unfortunate that we have local patriotism before the interest of the nation. I think, all this should not stand in the way of giving these railway lines.

Sir, one word about the development of port. Some time ago, when there was a half-an-hour debate in the Parliament, it was said that as soon as the port is developed, the question of railway line would be taken up. That is what the Finance Minister was saying now as soon as the Mangalore Hassan railway line is taken up, the port will be sanctioned. It is like the old saying "ಹುಚ್ಚನ ಲಗ್ನ-ಹುಚ್ಚ ಬಿಡುವವರೆಗೆ ಲಗ್ನವಾಗುವುದಿಲ್ಲ, ಲಗ್ನವಾಗುವವರಗೆ ಹುಚ್ಚು ಬಿಡುವುದಿಲ್ಲ". That is what the Government of India says and our Finance Minister seems to have seen reason in that. I hope, our Finance Minister will say that they must start these things immediately. There is absolute need for both these things. From ancient time, we had Goa. Later on we had developed Bhatkal as part of Vijayanagaram. When Tippu Sultan visited Malpe, he said: what a place this is for a port! The people of Mysore, people of Vijayanagar were thinking of using them. How is it that we are not getting a port for the export of goods from our State? This will help Government of India in getting a lot of foreign exchange and also develop the industries of this country. Therefore, I commend this amendment for the acceptance of this House. I am glad to hear that the Mover of the Resolution is willing to accept my amendment. I thank him for that.

Sri B. N. BORANNA GOWDA (Belur).—Sir, in supporting the resolution moved by my friend Sri Doddameti, I wish to offer a few remarks. The Hassan-Mangalore railway line was surveyed ten years back. The estimated cost was 19 crores and the Hubli-Karwar line was estimated to cost six crores. Several investigations were made with regard to Hassan-Mangalore line and we were under the impression that this line would be completed during the Second Five-Year Plan alone. But, we are still in doubt whether this would be taken up during the Third Plan. This line runs in the midst of malnad and mineral fields. We transport abundant mineral ore from Banasandra to Mangalore port and also from Sandur and Bellary to Karwar. The Port Trust has not taken a decision whether the Mangalore port should be developed or the Karwar port should be developed. Till this question is settled, we are not in a position to see the railway link. Sir, the malnad part produces, coffee, tea, cardamom, cashewnuts and pepper and also cocoanut. All these will earn a lot of foreign exchange. In the Board which has 60 members, almost all of them are North Indians. During the last ten years not even an inch of railway line is constructed in South India. It is very unfortunate. It is accepted that Satyamangala-Chamarajnagar line, Hassan-Mangalore line and several other lines are very important for the development of the trade in the State. Though we have been urging upon the Central Government in this regard, they are treating us in a step-motherly way. That is the feeling we have formed. I am not saying anything against the Central Government because that is also our Governme t But, I insist that these two lines should be taken up by the Centre immediately. Bombay has a very fine harbour and it has developed into such a big State because of the enormous income it gets from the harbour. The Trust Board has got many members from Bombay State. Perhaps, it is one of the reasons why they are not thinking of these harbours. With these remarks I request all my friends to support this Resolution whole-heartedly.

4-30 P.M.

Sri B. VAIKUNTA BALIGA (Mangalore I).—Mr. Speaker Sir, I support the Resolution in its original form as well as in its amended stage in its entirety. My feeling is that the

